ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ , ಕುಂದಾಪುರ
ಸಿ.ಸಿ. ನಂಬ್ರ:1202/2013

ಪ್ರಾಸಾ:2

ದಿನಾಂಕ: 16.03.2026

| | | |
|---|---|---|
| ವಾಗ್ಮೂಲದವರ ಹೆಸರು | : | ರಾಘವೇಂದ್ರ |
| ತಂದೆಯ ಹೆಸರು | : | ಲೇಟ್ ಶಂಕರ |
| ವಯಸ್ಸು | : | 61 ವರ್ಷ |
| ಉದ್ಯೋಗ | : | ನಿವೃತ್ತ ಎ ಎಸ್ ಐ |
| ವಾಸ ಸ್ಥಳ | : | ಮೇಪು |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಭಾ. ದಂ. ಪ್ರ, ಸಂ, ಕಲಂ 299 ಸಿ ಆರ್ ಪಿ ಸಿ ರಡಿಯಲ್ಲಿ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ನಾನು ಪೊಲೀಸ್ ಠಾಣೆ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯದಿಂದ ಒಂದು ಉದ್ಘೋಷಿತ ವಾರಂಟನ್ನು ಆರೋಪಿ ಹುಸೇನ್ ಖಾನ್ ಎಂಬುವರ ವಿರುದ್ಧ ಹೊರಡಿಸಿದ್ದು, ಅದನ್ನು ನಾನು ಪಡೆದುಕೊಂಡು ದಿ: 13.03.2025 ರಂದು ಕುಂದಾಪುರ ತಾಲೂಕು, ಎ.ಆರ್ ಫಾತಿಮಾ ಮಂಜಿಲ್, ಜನತಾ ಕಾಲೋನಿ, ಮೂಡುಗೋಪಾಢಿ ಬೀಜಾಡಿ ಗ್ರಾಮ ಎಂಬಲ್ಲಿಗೆ ಭೇಟಿ ನೀಡಿದ್ದು, ಅಲ್ಲಿನ ಸಾರ್ವಜನಿಕರನ್ನು ವಿಚಾರಿಸಲಾಗಿದ್ದು, ಆರೋಪಿಯ ಬಗ್ಗೆ ಯಾವುದೇ ವಿಚಾರಗಳು ಗೊತ್ತಾಗದೆ ತಲೆಮರೆಸಿಕೊಂಡಿರುವುದಾಗಿ ತಿಳಿದು ಬಂದಿರುತ್ತದೆ. ಆ ಕಾರಣದಿಂದ ನಾನು 30 ದಿನದೊಳಗೆ ನ್ಯಾಯಾಲಯಕ್ಕೆ ಹಾಜರಾಗಬೇಕೆಂದು ಹೇಳಿ ಟಾಂ ಟಾಂ ಮೂಲಕ ಪ್ರಚಾರ ಪಡಿಸಿದ್ದು, ನಂತರ ಉದ್ಘೋಷಿತ ವಾರಂಟಿನ ಪ್ರತಿಯನ್ನು ಮೂಡುಗೋಪಾಡಿಯ ಬಸ್ಸು ನಿಲ್ದಾಣ, ಇನ್ನೊಂದು ಪ್ರತಿಯನ್ನು ಆರೋಪಿಯ ಮನೆಯ ಗೋಡೆ, ಹಾಗೂ ಮತ್ತೊಂದು ಪ್ರತಿಯನ್ನು ಗೋಪಾಡಿ ಗ್ರಾಮ ಪಂಚಾಯಿತಿಯ ನೊಟೀಸು ಬೋರ್ಡಿಗೆ ಅಂಟಿಸಿ, ನಂತರ ಸ್ಥಳದಲ್ಲಿ ಉದ್ಘೋಷಿತ ಮಹಜರನ್ನು ಸಂಜೆ 4-30 ರಿಂದ 5.30 ಗಂಟೆಯವರೆಗೆ ಪಂಚರ ಸಮಕ್ಷಮ ತಯಾರಿಸಿ ಪಂಚರ ಸಹಿಯನ್ನು ಪಡೆದುಕೊಂಡಿರುತ್ತೇನೆ. ನಂತರ ಉದ್ಘೋಷಿತ ಪಂಚನಾಮೆ ಹಾಗೂ ವಾರಂಟನ ಪ್ರತಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿ ಈ ದಿನ ವಾರಂಟನ್ನು ಹಾಗೂ ಉದ್ಘೋಷಿತ ಪ್ರತಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-4 ಮತ್ತು ನಿಪಿ-5 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ತಹಶೀಲ್ದಾರವರು ನೀಡಿದ ವರದಿಯನ್ನು ನಿಪಿ-6 ಎಂದು ಗುರುತಿಸಲಾಯಿತು.

ಆರೋಪಿಗಳು ತಲೆಮರೆಸಿಕೊಂಡಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು

**ಮರು ವಿಚಾರಣೆ:** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ. ನ್ಯಾ. ದಂ. ಕುಂದಾಪುರ